ಲ ತುಂಗಭದ್ರಾ ಎಡದಂಡೆ ನಾಲೆಯಿಂದ ನೀರು ಪೂರೈಕೆ ಮಾಡುವ ಬಗ್ಗೆ

ಶ್ರೀ ಆರ್. ನಾರಾಯಣಪ್ಪ (ಸಿಂಧನೂರು).— ಮಾನ್ಯ ಅಧ್ಯಕ್ಷರೇ, ಇದೇ ಜನವರಿ ೨೦ ರಿಂದ ನನ್ನ ತಾಲ್ಲೂಕಿನಲ್ಲಿ ರೈತರು ಸರದಿ ಉಪವಾಸ ಸತ್ಯಾಗ್ರಹ ಕೈಗೊಂಡಿದ್ದಾರೆ. ಇದಕ್ಕೆ ಮುಖ್ಯ ಕಾರಣ ನೀರಾವರಿ ಇಲಾಖೆಯವರು ತುಂಗಭದ್ರ ಎಡದಂಡೆ ನಾಲೆಯನ್ನು ಫೆಬ್ರವರಿ ೨೮ಕ್ಕೆ ಬಂದ್ ಮಾಡುವುದಾಗಿ ಘೋಷಿಸಲಾಗಿರುವುದು. ಇದನ್ನು ವಿರೋಧಿಸಿ ರೈತರು ತಮ್ಮ ಬೆಳೆಯ ರಕ್ಷಣೆಗೋಸ್ಕರ ಏಪ್ರಿಲ್ ಮೊದಲನೇ ವಾರದವರೆಗೆ ನಾಲೆಯಲ್ಲಿ ನೀರನ್ನು ಪೂರೈಸಿಕೊಡಬೇಕೆಂದು ಸರಕಾರ ಮತ್ತು ಇಲಾಖೆಯನ್ನು ಒತ್ತಾಯಿಸಿ ಸತ್ಯಾಗ್ರಹ ಹೂಡಿದ್ದಾರೆ. ಆದ್ದರಿಂದ ಈಗಾಗಲೇ ಸತ್ಯಾಗ್ರಹ ಹತ್ತು ದಿವಸ ಕಳೆದಿರುವುದರಿಂದ ಸಂಬಂಧಪಟ್ಟ ಮಂತ್ರಿಗಳು ಈ ಬಗ್ಗೆ ಸದನಕ್ಕೆ ಖಚಿತವಾದ ಹೇಳಿಕೆಯನ್ನು ಕೊಡಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ. ಮತ್ತು ಎಷ್ಟು ದಿವಸಗಳವರೆಗೆ ನೀರು ಪೂರೈಸಲಾಗುವುದು ಎಂದು ತಿಳಿಸಬೇಕು.

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್.— ಈಗಾಗಲೆ ಸಿಂಧನೂರು ಮತ್ತು ರಾಯಚೂರು ಹಾಗೂ ಸುತ್ತಮುತ್ತಲ ಗ್ರಾಮಗಳಿಂದ ಅನೇಕ ಜನ ರೈತರು ಮತ್ತು ಅಲ್ಲಿನ ಶಾಸಕರು ಕೂಡಿಕೊಂಡು ನೀರಾವರಿ ಇಲಾಖೆಯ ಮಂತ್ರಿಗಳ ಕಛೇರಿಯಲ್ಲಿ ಈಗಾಗಲೇ ಚರ್ಚೆ ಮಾಡಿದ್ದಾರೆ. ಈ ಕಾರಿತಾಗಿ ರೈತರಲ್ಲಿ ಮನವಿಯನ್ನು ಕೂಡಾ ನಾವು ಮಾಡಿಕೊಂಡಿದ್ದೆವು. ನಾವು ನಡೆಸತಕ್ಕಂಥ ಸರದಿ ಉಪವಾಸವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಚರ್ಚೆಯಲ್ಲಿ ಮಾತನಾಡಿದ್ದೇವೆ. ವಾಪಸ್ಸು ತೆಗೆದುಕೊಳ್ಳತಕ್ಕಂತಹ ನಿರ್ಣಯವನ್ನೂ ಕೂಡಾ ಪ್ರಸ್ತಾಪ ಮಾಡಿದ್ದೇವೆ. ಅದಕ್ಕೆ ಸಂಬಂಧಪಟ್ಟ ಇಂಜಿನೀಯರ್‌ರವರನ್ನು ಕರೆಸಿಕೊಂಡು ಚೀಫ್ ಇಂಜಿನಿಯರ್‌ರವರನ್ನು ಕರೆಯಿಸಿಕೊಂಡು ಸಾಧ್ಯವಾದ ಮಟ್ಟಿಗೆ ನೀರನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ ಎನ್ನತಕ್ಕಂತಹ ವಿಶ್ವಾಸದ ಮಾತನ್ನು ನಾನು ಹೇಳಿದ್ದೇನೆ. ಒಂದು ತೀರ್ಮಾನಕ್ಕೆ ತ್ವರಿತವಾಗಿ ಬರೋಣವೆಂದೂ, ಸರದಿ ಉಪವಾಸವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಮನವಿ ಮಾಡಿಕೊಂಡಿದ್ದೇನೆ.

೯ ಹಿಂದ್ ಮಜ್‌ದೂರರ ಕಿಸಾನ್ ಪಂಚಾಯತ್ ಸಂಘಟನೆಯಿಂದ ಚಳುವಳಿ

ಶ್ರೀ ಎನ್. ಹೆಚ್. ಗೌಡ (ಕಂಮಟಾ) —ಮಾನ್ಯ ಅಧ್ಯಕ್ಷರೇ, ''ಹಿಂದ್ ಮಜ್ದೂರ್ ಕಿಸಾನ್''ನ ಕರ್ನಾಟಕ ಶಾಖೆಯವರು ''ಉದ್ಯೋಗದ ಹಕ್ಕು ಮೂಲಭೂತ ಹಕ್ಕಾಗಲಿ'' ಎಂಬ ಬೇಡಿಕೆಯನ್ನು ಮುಂದಿಟ್ಟು ಭಾರತದ ಸಂವಿಧಾನದಲ್ಲಿ ಉದ್ಯೋಗದ ಹಕ್ಕನ್ನು ಮೂಲಭೂತ ಹಕ್ಕೆಂದು ಸೇರ್ಪಡಿಸಲು ಒತ್ತಾಯಿಸುವ ಒಂದು ನಿರ್ಣಯವನ್ನು ರಾಜ್ಯದ ವಿಧಾನ ಮಂಡಲವು ಸ್ವೀಕರಿಸಬೇಕೆಂದೂ, ದಿನಾಂಕ ೨೪-೨-೧೯೮೬ ರೊಳಗೆ ಈ ನಿರ್ಣಯವನ್ನು ಸ್ವೀಕರಿಸದೇ ಇದ್ದಲ್ಲಿ, ವಿಧಿಯಿಲ್ಲದೆ ಕರ್ನಾಟಕ ರಾಜ್ಯದ ವಿವಿಧ ಜಿಲ್ಲಾ ಕೇಂದ್ರಗಳಲ್ಲಿ ತಾ ೨೪-೨-೧೯೮೬ ರಂದು ಪೆಂರವಣಿಗೆಗಳನ್ನು ನಡೆಸಬೇಕಾಗುವುದೆಂದೂ ತಿಳಿಸಿದ್ದಾರೆ. ಆದ್ದರಿಂದ ನಾನು ವಿಧಾನ ಸಭೆಯ ಒಬ್ಬ ಸದಸ್ಯನಾಗಿ ಹಿಂದ್ ಮಜ್ದೂರ್ ಕಿಸಾನ್ ಪಂಚಾಯತಿನ ಈ ಬೇಡಿಕೆಯತ್ತ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಡಿ. ಮಂಜುನಾಥ್,— ಉದ್ಯೋಗದ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು. — ನಿನ್ನೆಯ ದಿವಸದ ಪಿಟಿಳಿರ ಮೇರೆಗೆ ಬಾಕಿ ಇರುವ ವಿಷಯಗಳನ್ನು ತೆಗೆದುಕೊಳ್ಳುತ್ತೇವೆ:

ಕಮರ್ಷಿಯಲ್ ಟ್ಯಾಕ್ಸ್ ಇನ್‌ಸ್ಪೆಕ್ಟರ್ ಹುದ್ದೆಗೆ ಅರ್ಜಿಸಲ್ಲಿಸುವ ದಿನಾಂಕವನ್ನು ವಿಸ್ತರಿಸುವ ಬಗ್ಗೆ.

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಅಧ್ಯಕ್ಷರೇ, ಸರ್ಕಾರದ ವಾಣಿಜ್ಯ ಇಲಾಖೆಯ ಕಮರ್ಷಿಯಲ್ ಟ್ಯಾಕ್ಸ್ ಇನ್‌ಸ್ಪೆಕ್ಟರ್ ಹುದ್ದೆಗೆ ಅರ್ಜಿಯನ್ನು ಸಲ್ಲಿಸಲು ೩೧-೧-೧೯೮೬ ಕೊನೆಯ ದಿನವಾಗಿರುತ್ತದೆ. ಆದರೆ ಬೆಂಗಳೂರು ವಿಶ್ವವಿದ್ಯಾನಿಲಯವನ್ನು ಬಿಟ್ಟು ಉಳಿದ ಮೈಸೂರು, ಧಾರವಾಡ, ಮತ್ತು ಮಂಗಳೂರು ವಿಶ್ವವಿದ್ಯಾನಿಲಯಗಳು ಮಾತ್ರ ಡಿಸೆಂಬರ್ ತಿಂಗಳ ಪದವಿ ಪರೀಕ್ಷೆಗಳ ಫಲಿತಾಂಶ ಪ್ರಕಟಿಸಿ ಸುಮಾರು ೧೦ ದಿವಸಗಳು ಕಳೆದಿದ್ದು ಆದರೆ ಬೆಂಗಳೂರು ವಿಶ್ವವಿದ್ಯಾನಿಲಯಂ

ದವರು ೨೮-೧-೧೯೮೬ರಲ್ಲಿ ಪ್ರಕಟಿಸಿದ್ದಾರೆ. ಈ ಹುದ್ದೆಗೆ ಮಾರ್ಕ್ಸ್‌ಕಾರ್ಡ್ ಸಹಿತ ಅರ್ಜಿ ಹಾಕ ಬೇಕಾಗಿರುವುದರಿಂದ ಬೆಂಗಳೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಈ ಅವಕಾಶ ತಪ್ಪಿದಂತಾಗು ತ್ತದೆ. ವಿಶೇಷವಾಗಿ ಗ್ರಾಮಾಂತರದ ವಿದ್ಯಾರ್ಥಿಗಳಿಗೆ ತೊಂದರೆ ಆಗುತ್ತೆ".

ಆದುದರಿಂದ ಸದರಿ ಹುದ್ದೆಗೆ ಅರ್ಜಿ ಸಲ್ಲಿಸುವ ದಿನಾಂಕವನ್ನು ೧೯೮೬ರ ಫೆಬ್ರುವರಿ ೧೫ರ ಒಳಗೆ ವಿಸ್ತರಿಸಲು-ಸರ್ಕಾರವನ್ನು ಒತ್ತಾಯಪಡಿಸುತ್ತೇನೆ.

ಶ್ರೀ ಡಿ. ಮಂಜುನಾಥ್.—ಈಗಾಗಲೇ ಈ ವಿಷಯದಲ್ಲಿ ನಾವು ಕ್ರಮ ತೆಗೆದುಕೊಂಡಿದ್ದೇವೆ, ಆದಷ್ಟು ಜಾಗ್ರತೆ ಇತ್ಯರ್ಥಪಡಿಸುತ್ತೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.-ಮಾನ್ಯ ಮಂತ್ರಿಯವರು ಕಾರ್ಮಿಕ ಇಲಾಖೆಗೆ ಸಂಬಂಧಪಟ್ಟ ಹಾಗೆ ಉತ್ತರ ಹೇಳಿದರು. ನಾನು ಹೇಳಿದ್ದು ಪರೀಕ್ಷೆಗೆ ಸಂಬಂಧಪಟ್ಟದ್ದು ಕಾರ್ಮಿಕ ವಿಷಯವನ್ನು ನಾನಂ ಕೇಳಿಲ್ಲ.

ಶ್ರೀ ಡಿ. ಮಂಜುನಾಥ್.—ಆಯಿತು, ತಿಳಿಸುತ್ತೇನೆ.

೧೧ ಮಂಗಳೂರು-ಕೇರಳ ಹೆದ್ದಾರಿಯ ಕಂಕನಾಡಿ ನೇತ್ರಾವತಿ ಸೇತುವೆ ಬಳಿ ವಾಹನಗಳ ವೇಗದ ಮಿತಿಯ ಫಲಕಗಳನ್ನು ಹಾಕುವುದು.

ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಅಧ್ಯಕ್ಷರೇ, ಮಂಗಳೂರಿನಿಂದ ಕೇರಳಕ್ಕೆ ಹೋಗುವ ಹೆದ್ದಾರಿ ರಸ್ತೆಯಲ್ಲಿ ಮಿತಿಮೀರಿದ ವಾಹನಗಳ ಸಂಚಾರವಿದೆ. ಕಂಕನಾಡಿಯಿಂದ ನೇತ್ರಾವತಿ ಸೇತುವೆ ದಾಟಿ ತೊಕ್ಕೊಟ್ಟುವರೆಗೆ ಈ ರಸ್ತೆಯಲ್ಲಿ ವಾರಕ್ಕೆರಡು ಅಪಘಾತಗಳು ಆಗುತ್ತಿವೆ. ಕಳೆದ ಒಂಭತ್ತು ತಿಂಗಳಲ್ಲಿ ನೇತ್ರಾವತಿ ಸೇತುವೆಯ ಆಚೆ ಈಚೆ ಸುಮಾರು ಹತ್ತು ಜೀವ ಹಾನಿ ವಾಹನ ಅಪಘಾತಗಳಿಂದ ಸಂಭವಿಸಿದೆ. ೨೦ಕ್ಕೂ ಹೆಚ್ಚಿನ ಜನರು ತೀವ್ರ ಜಖಂಗೊಂಡಿರುತ್ತಾರೆ. ಇಲ್ಲಿ ವಾಹನ ಗಳ ಮಿತಿಮೀರಿದ ವೇಗ, ಮತ್ತು ಓವರ್ ಟೇಕ್ ನಡೆಯುತ್ತಲೇ ಇವೆ. ಆದಕಾರಣ ನೇತ್ರಾವತಿ ದೊಡ್ಡ ಸೇತುವೆಯ ಆಚೆ ಮತ್ತು ಈಚೆ ರಸ್ತೆಗಳಲ್ಲಿ ಇಂತಿಷ್ಟೆ ಕಿಲೋಮೀಟರ್ ವೇಗದಲ್ಲಿ ನಿಧಾನವಾಗಿ ವಾಹನಗಳು ಓಡಾಡಬೇಕೆಂಬ ದೊಡ್ಡ ಎರಡು ಫಲಕಗಳನ್ನು ಹಾಕುವುದು ಅತ್ಯಗತ್ಯವಾಗಿರುತ್ತದೆ. ಈ ಕಾರಿತು ಲೋಕೋಪಯೋಗಿ ಸಚಿವರೆ ಗಮನ ಸೆಳೆಯಬಯಸುತ್ತೇನೆ.

ಶ್ರೀ ಬಸವರಾಜಪಾಟೀಲ್ ಅಟ್ಟೂರ್ (ನೀರಾವರಿ ಖಾತೆ ರಾಜ್ಯ ಸಚಿವರು).—ಅಧ್ಯಕ್ಷರೇ, ಮಂಗಳೂರಿನಿಂದ ಕೇರಳಕ್ಕೆ ಹೋಗುವ ಹೆದ್ದಾರಿಯಲ್ಲಿ ಸಾಕಷ್ಟು ರಸ್ತೆ ಅಪಘಾತಗಳು ಆಗತಕ್ಕಂತಹ ಪರಿಸ್ಥಿತಿಯನ್ನು ಕಂಡು, ಮಾನ್ಯ ಸದಸ್ಯರು ಹೇಳಿದ ವಿಷಯದ ಬಗ್ಗೆ, ಅವರು ಹೇಳಿದಂತೆ ವಾಹನಗಳ ವೇಗದ ಮಿತಿಯನ್ನು ನಿಗಧಿಮಾಡಿ ಫಲಕಗಳನ್ನು ಹಾಕುವಂತಹ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

೧೨ ಡೊನೇಷನ್ ರದ್ದು ಮಾಡುವ ಬಗ್ಗೆ ಭಾರತೀಯ ವಿದ್ಯಾರ್ಥಿ ಫೆಡರೇಷನ್ ಚಳುವಳಿ

ಶ್ರೀ ಆರ್. ವೆಂಕಟಗಾಮಯ್ಯ (ಮಂಳಿಬಾಗಿಲು):—ಮಾನ್ಯ ಅಧ್ಯಕ್ಷರೇ ಕರ್ನಾಟಕದ ವಿದ್ಯಾ ಭ್ಯಾಸ ಇಲಾಖೆಯ ಮಂತ್ರಿ ಶೈಕ್ಷಣಿಕ ರಂಗದ ಹಲವಾರು ಸಮಸ್ಯೆಗಳು ದಿನೇ ದಿನೇ ಜನತೆಗೆ ವಿದ್ಯಾರ್ಥಿ ಗಳಿಗೆ ಅನುಕೂಲವಾಗುವುದರ ಬದಲು ಜಟಿಲಗೊಳ್ಳುತ್ತಿವೆ. "ಡೊನೇಷನ್ ರದ್ದು ಮಾಡುವರೆಂಬ ಘೋಷಣೆ ಸರ್ಕಾರದಲ್ಲಿದೆ. ಇನ್ನೊಂದು ಶೈಕ್ಷಣಿಕ ವರ್ಷ ಪ್ರಾರಂಭಿಸಲಾಗಿದ್ದರೂ ಈ ಬಗ್ಗೆ ಇರುವ ತಡೆಯಾಜ್ಞೆಯನ್ನು ರದ್ದು ಮಾಡಿಸಲು ಯಾವುದೇ ಕ್ರಮವನ್ನು ಸರಕಾರ ಕೈಗೊಂಡಿಲ್ಲ. ಈಗಲೂ ಎಲ್ಲಾ ತಾಂತ್ರಿಕ ಮತ್ತು ವೈದ್ಯಕೀಯ ಕಾಲೇಜುಗಳನ್ನು ಬಂಡವಾಳ ಶಾಹಿಗಳಿಗೆ ಇಲ್ಲವೇ ಬಾಲಬುಡಕರಿಗೆ ಮಾರಿ ಅವರಿಂದ ಸೀಟುಗಳನ್ನು ವ್ಯಾಪಾರಕ್ಕಿಟ್ಟಿದೆ. ವಿದ್ಯಾರ್ಥಿಗಳು ಈ ಬಗ್ಗೆ ಸರ್ಕಾರಕ್ಕೆ ಒಂದು ಲಕ್ಷಕ್ಕೂ ಮೇಲ್ಪಟ್ಟು ಸಹಿ ಸಂಗ್ರಹಿಸಿ ಈ ದಿವಸ ವಿದ್ಯಾಮಂತ್ರಿಗಳ ಅವಕಾಶನೆಗೆ ತಮ್ಮ ಕುಂದುಕೊರತೆಗಳನ್ನು ತರಲು ಮತ್ತು ಶೈಕ್ಷಣಿಕ ರಂಗದಲ್ಲಿನ ಸಮಸ್ಯೆಗಳಿಗೆ ಪರಿಹಾರ ಕೋರಲು ಭಾರತ ವಿದ್ಯಾರ್ಥಿ ಫೆಡರೇಷನ್ ಅವರ